ಸ್ವಾತಂತ್ರ್ಯದ ಅಮೃತಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343 ಇ–ಮೇಲ್ ವಿಳಾಸ : director.ahr.kptcl@gmail.com

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/44953/2023-24** **ದಿನಾಂಕ:** 23 APR 2025

**ವಿಷಯ:** ಕವಿಪ್ರನಿನಿಯಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಯ ನೇಮಕಾತಿ - ಸಹನಾ ಶಕ್ತಿ ಪರೀಕ್ಷೆ ನಡೆಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24, ದಿನಾಂಕ: 14.10.2024.
2. ದಾಖಲಾತಿ ಪರಿಶೀಲನೆಗೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023-24(DV), ದಿನಾಂಕ: 25.02.2025 ಮತ್ತು 10.03.2025.

*****

ನಿಗಮದ ದಿನಾಂಕ: 14.10.2024 ರ ಉದ್ಯೋಗ ಪ್ರಕಟಣೆಗೆ ಅನುಗುಣವಾಗಿ, ಉಲ್ಲೇಖ-2 ರ ಅಧಿಸೂಚನೆಯನ್ವಯ, 1:5 ಅನುಪಾತದಲ್ಲಿ shortlist ಆಗಿ, ದಾಖಲಾತಿಗಳನ್ನು ಅಪ್-ಲೋಡ್ ಮಾಡಿದಂತಹ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ಕೆಲವು ಅಭ್ಯರ್ಥಿಗಳು ಅರ್ಜಿಯಲ್ಲಿ ತಿಳಿಸಿರುವ ಕೆಲವೊಂದು ಮಾಹಿತಿಗಳು ತಪ್ಪಾಗಿರುವುದು ದಾಖಲಾತಿ ಪರಿಶೀಲನಾ ಸಮಯದಲ್ಲಿ ಕಂಡುಬಂದಿರುತ್ತದೆ. ಆದುದರಿಂದ, ಅಭ್ಯರ್ಥಿಗಳು ಅಪ್-ಲೋಡ್ ಮಾಡಿದ್ದ ಅಂಕಪಟ್ಟಿ ಮತ್ತು ಮೀಸಲಾತಿ ಪ್ರಮಾಣ ಪತ್ರಗಳಿಗನುಗುಣವಾಗಿ ಅವರು ಗಳಿಸಿರುವ ಅಂಕ, ಗರಿಷ್ಠ ಅಂಕ, ನೇರ ಮತ್ತು ಸಮತಳ ಮೀಸಲಾತಿಗಳಲ್ಲಿ ಸಲ್ಲಿಸಿದ್ದ ದಾಖಲಾತಿಗನುಗುಣವಾಗಿ ಅವರ ಅಂಕ ಮತ್ತು ಮೀಸಲಾತಿಗಳಿಗೆ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ ಹಾಗೂ ಉದ್ಯೋಗ ಪ್ರಕಟಣೆಯ ಷರತ್ತುಗಳನ್ನು ಪೂರೈಸದ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗಿರುತ್ತದೆ.

ಮೊದಲನೇ ಹಂತದ ದಾಖಲಾತಿ ಪರಿಶೀಲನೆಯ ನಂತರ, ಸಹನಾ ಶಕ್ತಿ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ 1:5 ಅನುಪಾತದ ಪಟ್ಟಿ ಹಾಗೂ ಶೇಕಡಾವಾರು ಕಟ್-ಆಫ್ ಅಂಕಗಳನ್ನು ಸಿದ್ಧಪಡಿಸಿ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಯು ಆಯ್ಕೆ ಪಟ್ಟಿಯಾಗಿರುವುದಿಲ್ಲ ಹಾಗೂ ಈ ಪಟ್ಟಿಯಲ್ಲಿನ ಅಭ್ಯರ್ಥಿಗಳ ಆಯ್ಕೆಯು ಅವರ ದಾಖಲಾತಿ ಸಲ್ಲಿಕೆ ಹಾಗೂ ಸಹನ ಶಕ್ತಿ ಪರೀಕ್ಷೆಯ ಅರ್ಹತೆಗೆ ಒಳಪಟ್ಟಿರುತ್ತದೆ. ಆದಾಗ್ಯೂ, ಮೊದಲನೇ ಹಂತದಲ್ಲಿ ದಾಖಲಾತಿಗಳನ್ನು online ಮೂಲಕ ಅಪ್-ಲೋಡ್ ಮಾಡದೇ ಇರುವ ಅಭ್ಯರ್ಥಿಗಳನ್ನು ಸಹ ಪ್ರಸ್ತುತ 1:5 ಅನುಪಾತದ ಪಟ್ಟಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಪರಿಗಣಿಸಲಾಗಿರುತ್ತದೆ.

ಕವಿಪ್ರನಿನಿಯಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, **ದಿನಾಂಕ: 05.05.2025 ರಿಂದ 08.05.2025** ರವರೆಗೆ ಬೆಂಗಳೂರು, ಬಾಗಲಕೋಟೆ, ಬೆಳಗಾವಿ ಮತ್ತು ಕಲಬುರಗಿಯ, ಈ ಕೆಳಗೆ ತಿಳಿಸಿರುವ ವಿವಿಧ ಕೇಂದ್ರಗಳಲ್ಲಿ ಸಹನ ಶಕ್ತಿ ಪರೀಕ್ಷೆಯನ್ನು ನಡೆಸಲಾಗುವುದು. **ಪ್ರತಿ ಅಭ್ಯರ್ಥಿಯ ಸಹನ ಶಕ್ತಿ ಪರೀಕ್ಷೆಯ ಕರೆ ಪತ್ರಗಳನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಇಂದ ದಿನಾಂಕ: 28.04.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.** ಅಭ್ಯರ್ಥಿಗಳು, ಕರೆ ಪತ್ರದಲ್ಲಿ ತಿಳಿಸಿರುವ ದಿನಾಂಕ ಮತ್ತು ಪರೀಕ್ಷಾ ಕೇಂದ್ರ, ಅಭ್ಯರ್ಥಿಗಳ ತಮ್ಮ ಅರ್ಜಿಯಲ್ಲಿ ತಿಳಿಸಿರುವ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಮೀಸಲಾತಿಗೆ ಅನುಗುಣವಾಗಿ ಎಲ್ಲಾ ದಾಖಲಾತಿಗಳ ಮೂಲ ಹಾಗೂ ಝೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗತಕ್ಕದ್ದು. ಸಹನ ಶಕ್ತಿ ಪರೀಕ್ಷೆಯ ದಿನಾಂಕ ಮತ್ತು ಸ್ಥಳಗಳ ಬದಲಾವಣೆ ಬಗ್ಗೆ ಯಾವುದೇ ಮನವಿ/ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

| ಸಹನಾ ಶಕ್ತಿ ನಡೆಸಲಾಗುವ ಸ್ಥಳ | ದಿನಾಂಕ |
|---|---|
| YMCA ಕ್ರೀಡಾಂಗಣ, ನೃಪತುಂಗ ರಸ್ತೆ, ಬೆಂಗಳೂರು | 05.05.2025 ರಿಂದ 07.05.2025 |
| ಹೊರ ಕ್ರೀಡಾಂಗಣ, ಜ್ಞಾನ ಗಂಗಾ, ಗುಲಬರ್ಗಾ ವಿಶ್ವವಿದ್ಯಾಲಯ, ಸೇಡಂ ರಸ್ತೆ, ಕಲಬುರಗಿ | 05.05.2025 ರಿಂದ 08.05.2025 |
| ಜಿಲ್ಲಾ ಕ್ರೀಡಾಂಗಣ, ಸೆಕ್ಟರ್ 39, ನವನಗರ, ಬಾಗಲಕೋಟೆ | 05.05.2025 ರಿಂದ 08.05.2025 |
| ಜಿಲ್ಲಾ ಕ್ರೀಡಾಂಗಣ, ನೆಹರೂನಗರ, ಬೆಳಾಗಾವಿ | 05.05.2025 ರಿಂದ 08.05.2025 |

**ಸೂಚನೆ:** ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವಾಗ ಅಂಕಗಳನ್ನು ತಪ್ಪಾಗಿ ನಮೂದಿಸಿದ್ದಲ್ಲಿ, ಮೂಲ ಅಂಕಪಟ್ಟಿಯನ್ನು ಪರಿಶೀಲಿಸಿ, ಅಭ್ಯರ್ಥಿಯ ಶೇಕಡಾವಾರು ಅಂಕವು ನಿಗದಿಪಡಿಸಿದ ವರ್ಗದ (category) ಕಟ್-ಆಫ್ ಗಿಂತ ಹೆಚ್ಚಿದ್ದಲ್ಲಿ ಮಾತ್ರ ಸಹನ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಒಂದು ವೇಳೆ ಶೇಕಡಾವಾರು ಅಂಕವು ನಿಗದಿಪಡಿಸಿದ ಕಟ್-ಆಫ್‌ಗಿಂತ ಕಡಿಮೆ ಇದ್ದಲ್ಲಿ ಅಂತಹವರನ್ನು ಸಹನ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದಿಲ್ಲ. ನೇರ ಮತ್ತು ಸಮತಳ ಮೀಸಲಾತಿಯಲ್ಲಿ ನೀಡಿರುವ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ, ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)**
**ಕವಿಪ್ರನಿನಿ**